ದಿನಾಂಕಃ 18–06–2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ ಎಸ್ಜಿಕೆ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ**

ಬಾಕಿ ಹಣ ಪಡೆದುಕೊಂಡು ಶುದ್ಧ ಕ್ರಯ ಪತ್ರವನ್ನು ಮಾಡಿಕೊಡು ಎಂದು 1ನೇ ಪ್ರತಿವಾದಿಗೆ ನಾನು ಬರವಣಿಗೆಯಲ್ಲಿ ನೋಟೀಸ್ ಕೊಟ್ಟಿಲ್ಲ. ಹೊಗಡೆ ರಾಮ್ ಎಂಬಾತ ನನ್ನ ಪರವಾಗಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪ್ರತಿಬಂಧಕ ಆಜ್ಞೆ ಇದೆ ಎಂಬುದಾಗಿ ನನಗೆ ನೋಟೀಸ್ ಕೊಟ್ಟಿದ್ದರು. ಈ ದಾವೆಯಲ್ಲಿ ಆತ ಪಾರ್ಟಿ ಅಲ್ಲ. ಆ ರೀತಿ ನೋಟೀಸ್ ಬಂದ ಮೇಲೆ 1ನೇ ಪ್ರತಿವಾದಿಗೆ ನಿಪಿ–3 ರಂತೆ ನೋಟೀಸ್ ಕೊಟ್ಟಿದ್ದೆ. ನಿಪಿ–3 ರಲ್ಲಿ ಸಹಿತ ಬಾಕಿ ಹಣ ರೆಡಿ ಇದೆ ನೀವು ಬಂದು ಹಣ ಪಡೆದುಕೊಂಡು ದಾವಾ ಆಸ್ತಿಯನ್ನು ನನಗೆ ಕ್ರಯ ಪತ್ರದ ಮೂಲಕ ನೊಂದಣಿ ಮಾಡಿಕೊಡಿ ಎಂದು ನಾನು ಹೋಗಲಿಲ್ಲ. ಪ್ರತಿವಾದಿ 1 ರವರು ನಿಪಿ–5 ರಿಂದ 7 ರಂತೆ ನನಗೆ ನೋಟೀಸ್ ಕೊಟ್ಟಿದ್ದಾರೆ. ನಿಪಿ–5 ರಿಂದ 7 ರಲ್ಲಿ 1ನೇ ಪ್ರತಿವಾದಿಯವರು ನೀವು ಪಾವತಿಸಿರುವಂತಹ ಮುಂಗಡ ಹಣವನ್ನು ಪಡೆದುಕೊಳ್ಳಿ ಅದಕ್ಕೆ ಸಂಬಂದಪಟ್ಟಂತೆ ಬ್ಯಾಂಕ್ ಖಾತೆ ನೀಡಿದರೆ ನಾನು ಅದಕ್ಕೆ ಪಾವತಿ ಮಾಡುತ್ತೆನೆ ಎಂದು ಹೇಳಿದ್ದಾರೆ. ಅವರು ಕಳಿಸಿದ ನಿಪಿ–5 ರಿಂದ 7 ರ ನೋಟೀಸ್‌ಗೆ ನಾನು ಬರವಣಿಗೆಯಲ್ಲಿ ಉತ್ತರ ನೀಡಿಲ್ಲ. ಆದರೆ ಮೌಖಿಕವಾಗಿ 1ನೇ ಪ್ರತಿವಾದಿಗೆ ಹೊಗಡೆ ರಾಮ್ ಆತನಿಗೆ ನ್ಯಾಯಲಯ ನೀಡಿರುವ ಪ್ರತಿಬಂಧಕ ಆಜ್ಞೆಯನ್ನು ರದ್ದು ಮಾಡಿಸಿದರೆ ನಾನು ಬಾಕಿ ಹಣವನ್ನು ಕೊಡುತ್ತೇನೆ ನಂತರ ನನಗೆ ನೀವು ಕ್ರಯ ಪತ್ರ ಮಾಡಿಕೊಡಿ ಎಂದು ಮೌಖಿಕವಾಗಿ ಕೇಳಿಕೊಂಡಿದ್ದೆ. ನಾನು ಮೌಖಿಕವಾಗಿ ಆತನನ್ನು ಕೇಳಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮಾರಾಟಗಾರನ ಸ್ವತ್ತಿಗೆ ಸಂಬಂದಪಟ್ಟಂತೆ ಮಾಲೀಕತ್ವಕ್ಕೆ ಸಂಬಂದಪಟ್ಟಂತೆ ಯಾವುದಾದರೂ ತೊಂದರೆ ಇದ್ದಲ್ಲಿ ಖರೀದಿಗಾರನೂ ಪಾವತಿ ಮಾಡಿದಂತಹ ಮುಂಗಡ ಹಣವನ್ನು ವಾಪಾಸು ಮಾಡಿ ಕರಾರನ್ನು ರದ್ದು ಗೊಳಿಸಬಹುದು ಎಂದು ನಿಪಿ–1 ರಲ್ಲಿ ಇದೆ ಎಂದರೆ ಸರಿ. ಕರಾರಿನ ಪ್ರಕಾರ ನಾನು ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹೊಗಡೆ ರಾಮ್ನಿಂದ ನಾನೇ ದಾವೆ ಹೂಡಿಸಿ ಆತನಿಂದ ನಾನೇ ನೋಟೀಸ್ ಕೊಡು ಎಂದು ಹೇಳಿ ಹೊಗಡೆ ರಾಮ್ ಕೇಸು ಮಾಡಿದ್ದಾನೆಂದು ಹೇಳಿ ಮತ್ತು ಅದನ್ನು ಬಗೆಹರಿಸಿಕೊಡು ಎಂದು ಹೇಳಿ ನೋಟೀಸ್ ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆಮಾಡಿಸಿದ್ದೇನೆ. ಸರ್ವೆ ಇಲಾಖೆಯವರು ಅಳತೆ ಮಾಡಿದ್ದಾರೆ. ಸಾಕ್ಷಿ ಮುಂದುವರಿದು ನುಡಿಯುತ್ತಾರೆ ಖಾಸಗಿಯವರಿಂದ ಸರ್ವೆ ಮಾಡಿಸಿದ್ದೇನೆ. ಖಾಸಗಿ ಸರ್ವೆಯವರ ಹೆಸರು ಗೊತ್ತಿಲ್ಲ. ಸರ್ವೆ

ಮಾಡುವ ಕಾಲಕ್ಕೆ ಮೂಲ ನಕಾಶೆ ಇರಬೇಕು ಎಂದರೆ ನಿಜ. ಅಕ್ಕ ಪಕ್ಕದವರಿಗೆ ನೋಟೀಸ್ ಕೊಡಬೇಕಾಗುತತದೆ ಎಂದರೆ ಸಾಕ್ಷಿ ಹೇಳುತ್ತಾರೆ ಖಾಸಗಿ ಸರ್ವೆಯವರು ಸರ್ವೆ ಮಾಡಿದಾಗ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ಯಾವುದೇ ರೀತಿಯ ಸರ್ವೆ ನಾನು ಮಾಡಿಸಿಲ್ಲ ಎಂದರೆ ಸುಳ್ಳು. ನಾನು ಸಲ್ಲಿಸಿರುವ ತೆರಿಗೆ ವರದಿ ಈ ಕೇಸಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವೀರಾರೆಡ್ಡಿ ಎಂಬಾತ ತಾನು ಹೂಡಿಕೆ ಮಾಡಿದಂತಹ ಹಣ ವಾಪಾಸು ಪಡೆದಿದ್ದಾನೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ವಿಲೇ ಇರುವುದರ ಬಗ್ಗೆ ನಾನು ಯಾವುದೇ ವೃತ್ತ ಪತ್ರಿಕಯಲ್ಲಿ ಪ್ರಚಾರ ಮಾಡಿಲ್ಲ. ದಾವೆ ಹೂಡುವ ಮೊದಲು ಕೂಡ ನಾನು ವೃತ್ತ ಪತ್ರಿಕೆಯಲ್ಲಿ ಪ್ರಚಾರ ಮಾಡಿಲ್ಲ.

**1 ನೇ ಪ್ರತಿವಾದಿ ಹಾಜರಿಲ್ಲ ಪಾಟಿ ಸವಾಲು ಇಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಚ್ಚಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ)

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಯಚೂರು.